**OS 51-16 PW3**

**ದಿನಾಂಕಃ 19.06.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು 1 ನೇ ಪ್ರತಿವಾದಿ ಪರ ಎನ್ ಕೆ ಜೆ ವಕೀಲರಿಂದ**

ಸಾಂಪ್ರಾದಾಯಿಕ ತಂತ್ರಜ್ಞಾನ ಎನುಎಂದು ನನಗೆ ಗೊತ್ತಿಲ್ಲ. ಒ ಎಸ್ 29/2013 ರಲ್ಲಿ ಕೇಳಿದ್ದ ಹೆಚ್ಚಿನ ವಿಷಯದ ಬಗ್ಗೆ ನಾನು ಎನು ಮಾಹಿತಿ ಕಲೆ ಹಾಕಿರುವುದಿಲ್ಲ. ಕಟ್ಟಡ ಗಟ್ಟಿ ಇದೆ ಎಂದು ಯಾರು ಹೇಳಬೇಕು ಎಂದು ಗೊತ್ತಿಲ್ಲ. ಕಟ್ಟಡದ ಗಟ್ಟಿತನವನ್ನು ಸಿವಿಲ್ ಇಂಜಿನಿಯರ್ ಹೇಳಬೇಕುಎಂದರೆ ಸರಿ. ನಾನು ಕಟ್ಟಡ ಬಾಳ್ವಿಕೆ ಬಗ್ಗೆ ಹೇಳಲು ನಾನು ತಜ್ಞ ಅಲ್ಲ ಎಂದರೆ ಸರಿ. ವಾದಿಗೆ ಪುರಸಭೆಯವರು ಕಟ್ಟಡ ಅಪಾಯ ಸ್ತಿತಿಯಲ್ಲಿರುವ ಬಗ್ಗೆ ನೋಟಿಸು ನೀಡಿರುವ ಬಗ್ಗೆ ಗೊತ್ತಿಲ್ಲ, ಸುರತ್ಕಲ್ ಇಂಜಿನಿಯರಿಂಗ್ ಕಾಲೆಜಿನಿಂದ ಸಿವಿಲ್ ಇಂಜಿ ನಿಯರ್ ಗಳು ಬಂದುಕಟ್ಟಡವನ್ನು ಪರಿಶೀಲಿಸಿ ವರದಿ ನೀಡಿದ ಬಗ್ಗೆ ಗೊತ್ತು. ಅವರು ಪರಿಶೀಲನೆಗೆ ಬಂದಾಗ ವಾದಿ ಬಿಟ್ಟು ಇನ್ನಾರು ಇದ್ದರು ಎಂದು ಹೇಳಲಗುವುದಿಲ್ಲ ನಾನು ಒಳಗಿನ ಕೋಣೆಯಲ್ಲಿದ್ದೆ . ನಿಡಿ 2,3, 6, 10 ಮತ್ತು 12 ರಲ್ಲಿ ಕಟ್ಟಡವನ್ನು ಗುರುತಿಸಬಲ್ಲೆ ಆದರೆ ನಿಡಿ 10 ರಲ್ಲಿ ಬೋರ್ಡ್ ಮಾತ್ತ ಕಟ್ಟಡ ಗೊತ್ತಾಗುವುದಿಲ್ಲ.

ಸದ್ರಿ ಕಟ್ಟಡದಲ್ಲಿ ಎಷ್ಟು ವ್ಯಾಪಾರ ಆಗುತ್ತಿತ್ತುನನಗೆ ಗೊತ್ತಿಲ್ಲ. ನನ್ನ ಕೆಲಸ ಫೈಬರ್ ಸಾಮಾನುಗಳನ್ನು ಮತ್ತು ವೆಲ್ಡಿಂಗ್ ತಯಾರಿಸುವುದು. ನನಗೆ ತಿಂಗಳ ಸಂಬಳ ಕೊಡುತ್ತಿದ್ದರು. ಲೇಬರ್ ಇಲಾಖೆಯಲ್ಲಿ ನನ್ನ ಹೆಸರು ನೋಂದವಾಣಿ ಆದ ಬಗ್ಗೆ ಗೊತ್ತಿಲ್ಲ. ಧಣಿ ಮೆಡಿಕಲ್ ಇನ್ಸೂರೆನ್ಸ್ ಮಾಡಿಕೊಟ್ಟಿದ್ದರು. ಸ್ಟಾಕ್ ರಿಜಿಸ್ಟರ್ ಬಗ್ಗೆ ಗೊತ್ತಿಲ್ಲ ಆದರೆ ದಾಖಲೆ ಇಡುತ್ತಿದ್ದರು. ವ್ಯವಾಹಾರಕ್ಕೆ ಸಂಬಂಧಿಸಿದ ಯಾವ ವಸ್ತುಗಳು ಇದ್ದವು ನಾನು ಪ್ರಮಾಣ ಪತ್ರದಲ್ಲಿ ಹೇಳಿಲ್ಲ. 2 ನೇ ಹೆಚ್ಚುವರಿ ನ್ಯಾಯಾಲಯ ವನ್ನು ನಾನು ಒಳಗೆ ಹೋಗಿ ಅದರ ಸ್ತಿತಿಗತಿಯ ಬಗ್ಗ ಪರಿಶೀಲನೆ ಮಾಡಿರುವುದಿಲ್ಲ. 2 ನೇ ಹೆಚ್ಚುವರಿ ನ್ಯಾಯಾಲಯ ಯಾವಾಗ ಕಟ್ಟಿದ್ದು ಎಂದು ನನಗೆ ಗೊತ್ತಿಲ್ಲ.

ದಿನೇಶ್ ಭವನ ಕಟ್ಟಡ ಈಗ ಹೊಸದಾಗಿ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ವಿವಾದಿತ ಕಟ್ಟಡಕ್ಕೆ ದಿನೇಶ್ ಭವಾನ ಹೋಟೆಲ್ ತಾಗಿಕೊಂಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ಕಟ್ಟಡದ ಪಕ್ಕದಲ್ಲಿ ಬಾರ್ ಇದೆ ನಂತರ ದಿನೇಶ್ ಭವನ ಹೋಟೆಲ್ ಇದೆ ಎನ್ನುತ್ತಾರೆ. ಶಿವರಾಮ್ ಭಟ್ ರವರ ಕ್ಲಿನಿಕ್ ಗೆ ಹೋಗಲು ಮೆಟ್ಟಿಲುಗಳು ಇತ್ತು. ನಂತರ ಬಾರ್ ನಂತರ ಕ್ಷೌರಿಕರ ಅಂಗಡಿ ನಂತರ ಪಾಸೇಜ್ ನಂತರ ಅಶ್ವಿನಿ ಮೆಡಿಕಲ್ ನಂತರ ಮೊಬೈಲ್ ಶಾಪ್ ನಂತರ ದಿನೇಶ್ ಭವನ ಹೋಟೆಲ್ ಎಂದರೆ ಸರಿ. ದಿನೇಶ್ ಭವನ ಕಟ್ಟಡಕ್ಕೆ ಸುಮಾರು 100 ವರ್ಷ ಕಳೆದಿರಬಹುದು. ಎಸ್ ಬಿ ಎಂ ಇದ್ದ ದಿನೇಶ್ ಭವನದ ಕಟ್ಟಡ ರಿಪೇರಿ ಮಾಡಿ ಹೊಸದಾಗಿ ಮಾಡಿರುತ್ತಾರೆ.

ವಿವಾದಿತ ಕಟ್ಟಡವನ್ನು ಹೇಗೆ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಹಂಚಿನ ಕಟ್ಟಡಗಳು ವಿಪಾರಿತ ಮಳೆ ಇರುವುದರಿಂದ ಪ್ರತಿ ವರ್ಷ ನಿರ್ವಹಣೆ ಮಾಡಬೇಕು ಎಂದರೆ ಸರಿಯಲ್ಲ. ಹಂಚು ಮಳೆಗೆ ನೀರು

**OS 51-16 PW3**

ಎಳೆದುಕೊಂಡು ತೇವಾಂಶ ಆಗುತ್ತದೆ ಎಂದರೆ ಸರಿ. ಕಟ್ಟಡಕ್ಕೆ ಎಷ್ಟು ಸಾಲು ಹಂಚು, ಎಷ್ಟು ರೀಪು ಇತ್ತ, ಪಂಚಾಂಗದ ವಿಸ್ತೀರ್ಣ ಗೊತ್ತಿಲ್ಲ.

ಕೆ ಎಸ್ ಆರ್ ಟಿ ಸಿ ಬಸ್ ಸ್ಟಾಂಡ್ ಉತ್ತರದಿಂದ ದಕ್ಷಿಣಕ್ಕೆ ಇಳಿಜಾರು ಇದ್ದು ಮಳೆ ನೀರು ದಕ್ಷಿಣಕ್ಕೆ ಬರುತ್ತದೆ ಎಂದರೆ ಸರಿ. ಬಸ್ ಸ್ಟಾಂಡ್ ತಾಗಿಕೊಂಡು ಮಂಗಳೂರು ಮೈಸೂರು ರಸ್ತೆ ಇರುತ್ತದೆ ಎಂದರೆ ಸರಿ. ಅದೇ ರಸ್ತೆ ವಿವಾದಿತ ಕಟ್ಟಡಕ್ಕೆ ತಾಗಿಕೊಂಡಿರುತ್ತದೆ ಎಂದರೆ ಸರಿ. ಮಾಹಾಮಾಯಿ ರಸ್ತೆ ಕೂಡ ಕಟ್ಟಡಕ್ಕೆ ತಾಗಿಕೊಂಡಿದೆ ಎಂದರೆ ಸರಿ. ಸೇಂಟ್ ವಿಕ್ಟರ್ ಶಾಲೆ ಇನ್ನೊಂದು ಬದಿಗೆ ತಾಗಿಕೊಂಡಿದೆ ಎಂದರೆ ಸರಿ. ಮಹಾಮಾಯಿ ರಸ್ತೆಗೆ ಮಳೆ ನೀರು ಬರುತ್ತಿತ್ತು ಎಂದರೆ ಸ್ವಲ್ಪ ಬರುತ್ತಿತ್ತು ಎಂದರೆ ಸರಿ. ಶಾಲೆಗೆ ಹೋಗುವ ಮಕ್ಕಳು ಅದೇ ರಸ್ತೆಯಲ್ಲಿ ಒಡಾಡುತ್ತಿದ್ದರು ಎಂದರೆ ಸರಿ. ವಾಹನಗಳ ದಟ್ಟಣೆ ಎರಡೂ ರಸ್ತೆಗಳಲ್ಲಿ ಇದೆ ಎಂದರೆ ಸರಿ.

ನ್ಯಾಯಾಲಯದ ಕಟ್ಟಡದ ಬಗ್ಗೆ ಲೋಕೋಲಪಯೋಗಿ ಇಲಾಖೆಯವರು ಕೇಳಿರುವುದಿಲ್ಲ. ಲೇಬರ್ ಆಕ್ಟ್ ಅಡಿಯಲ್ಲಿ ಇರುವ ದಾಖಲಾತಿಯನ್ನು ಈ ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಷಯ ಗೊತ್ತಿಲ್ಲದಿದ್ದರೂ ಸಹ ವಾದಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪುರಸಭೆಯವರ ಯಾವುದೇ ತಪ್ಪಿಲ್ಲ ಎಂದರೆ ಸರಿಯಲ್ಲ. ಪುರಸಭೆಯವರು ಸಾರ್ವಜನಿಕರ ಹಿತದೃಷ್ಟಿಯಿಂದ ಕಟ್ಟಡ ಅಪಾಯ ಪರಿಸ್ಥಿತಿಯಲ್ಲಿದ್ದು ನೆಲಸಮ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು

ಪುತ್ತೂರು